

ಎಂದು ಆಸೆ ಪಟ್ಟು ಕೇಳಿದ್ದೆಲ್ಲ ಕೊಟ್ಟು ಚೌಟ್ರಿಯಲ್ಲಿ ಅದ್ಧೂರಿಯಾಗಿ ಮದುವೆ ಮಾಡಿಕೊಟ್ಟಿದ್ದ.

ಉದ್ಯೋಗ ನಿಮಿತ್ತ ನಗರದಲ್ಲಿದ್ದ ಕೆಂಪ, ಹೆಂಡ್ತಿ ಬರುತ್ತಾಳೆಂಬುದು ಖಾತ್ರಿಯಾದ ನಂತರ ತಾನು ಹಿಂದೆ ಇದ್ದ ಬ್ಯಾಚುಲರ್ ರೂಮನ್ನು ತೆಜಿಸಿ ಆಫೀಸ್‌ಗೆ ಹತ್ತಿರವಾಗುವಂತೆ ಒಂದು ಸಿಂಗಲ್ ಬೆಡ್ ರೂಮ್ ಮನೆಯನ್ನು ಬಾಡಿಗೆಗೆ ಹಿಡಿದು, ಅದಕ್ಕೆ ಬೇಕಾದ ಸಾಮಾನು ಸರಂಜಾಮನ್ನೆಲ್ಲ ಜೋಡಿಸಿಕೊಂಡ. ಹಾಸಿಗೆ ಇತ್ಯಾದಿಗಳನ್ನ ಮಾವ ತಂದು ಮನೆ ತುಂಬಿಸಿದ. ಚಂದದ ಹುಡುಗಿಯೊಂದಿಗಿನ ಕೆಂಪನ ಅಂದದ ಬದುಕು ಖುಷಿ ಖುಷಿಯಾಗೆ ಸಾಗತೊಡಗಿತು. ಕೆಂಪ ಆಫೀಸ್‌ನಿಂದ ಬೇಗನೆ ಮನೆಗೆ ಬರುವುದು, ಗಂಡ ಬರುವಷ್ಟರಲ್ಲಿ ಹೆಂಡತಿ ಬಗೆ ಬಗೆ ತಿನಿಸುಗಳನ್ನು ಮಾಡಿಟ್ಟುಕೊಂಡು ಕಾಯುವುದು ಇತ್ಯಾದಿ ನಡೆದೇ ಇತ್ತು. ತಿಂಗಳೆರಡಾಯಿತು. ಕೆಂಪನಿಗೆ ಹೊಸಮನೆಯಲ್ಲಿ ಎಲ್ಲಾ ಇದ್ದರೂ ಏನೊ ಕೊರಗು ಎನಿಸತೊಡಗಿತು. ಅದೇನೆಂದು ಪತ್ತೆ ಹಚ್ಚಿಕೊಂಡ ಕೆಂಪ ಈ ಬಾರಿ ಊರಿಗೆ ಹೋದಾಗ ಅಪ್ಪನಿಗೆ ಹೇಳಿ